ಆ) ಇದುವರೆವಿಗೂ ಎಷ್ಟು ಕಟ್ಟಡಗಳು ಪೂರ್ಣವಾಗಿ ಶಾಲೆಯ ವಶಕ್ಕೆ ಬಂದಿದೆ?

ಇ) ಖಾಲಿ ಇರುವ ಶಿಕ್ಷಕರ ಹುದ್ದೆಗಳಲ್ಲಿ ಇದುವರೆವಿಗೂ ಭರ್ತಿ ಮಾಡಲಾದ ಹುದ್ದೆಗಳೇಷ್ಟು?

ಉ) ಕಪ್ಪು ಹಲಗೆ ಯೋಜನೆಯಡಿಯಲ್ಲಿ ಈ ಕೆಳಕಂಡ ಶಾಲಾ ಕೊಠಡಿಗಳನ್ನು ನಿರ್ಮಿಸಲು ಸರ್ಕಾರವು ಉದ್ದೇಶಿಸಿದೆ.

ಹಂತ	ಮಂಜೂರಾದ ಶಾಲಾ ಕೊಠಡಿಗಳು.
1ನೇ ಹಂತ (87-88)	2,260
2ನೇ ಹಂತ (88-89)	6,094
3ನೇ ಹಂತ (89-90)	3,438
4ನೇ ಹಂತ (90-91)	6,761
ಒಟ್ಟು	18,553

ಊ) ಇದುವರೆವಿಗೂ ಪೂರ್ಣಗೊಂಡು ಶಿಕ್ಷಣ ಇಲಾಖೆಯ ವಶಕ್ಕೆಬಂದಿರುವ ಶಾಲಾ ಕೊಠಡಿಗಳ ಸಂಖ್ಯೆ

1ನೇ ಹಂತ	-1,643
2ನೇ ಹಂತ	-2,654
3ನೇ ಹಂತ	-915
ಒಟ್ಟು	5,212

ಋ) ಈ ಯೋಜನೆಯಡಿಯಲ್ಲಿ ಸೃಡಿಸಲಾದ ಮತ್ತು ಭರ್ತಿ ಮಾಡಲಾದ ಶಿಕ್ಷಕರ ಹುದ್ದೆಗಳ ವಿವಗಳು,

	ಸೃಜಿಸಲಾದ ಹುದ್ದೆಗಳು	ಭರ್ತಿಮಾಡಲಾದ ಹುದ್ದೆಗಳು
1ನೇ ಹಂತ	1611	1611
2ನೇಹಂತ	5003	5003
3ನೇ ಹಂತ	2712	
4ನೇ ಹಂತ	4597	6614
ಒಟ್ಟು	13,923	6614

ಹಾಸನದಿಂದ ಬೊಂಬಾಯಿಗೆ ಬಸ್ಸು ಓಡಿಸುವುದು.

3427 - ಶ್ರೀ ಕೆ. ಹೆಚ್. ಹನುಮೇಗೌಡ (ಹಾಸನ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಹಾಸನ ಸಿಟಿಯಿಂದ ಬೊಂಬಾಯಿಗೆ ಒಂದು ಲಕ್ಷುರಿ ಬಸ್ಸನ್ನು ಓಡಿಸಲು ಕೆ.ಎಸ್.ಆರ್.ಟಿ.ಸಿಯವರು ಕಾರ್ಯಕ್ರಮ ಹಾಕಿಕೊಂಡಿರುವುದು ನಿಜವೇ?

ಆ) ಹಾಗಿದಲ್ಲಿ ಈ ಬಸ್ಸನ್ ಯಾವ ತಾರೀಖಿನಿಂದ ಓಡಿಸಲಾಗುವುದು.

ಶ್ರೀ ಅಜೀಜ್ ಸೇಠ್ (ಸಾರಿಗೆ ಸಚಿವರು)

ಆ) ಶ್ರವಣಬೆಳಿಗೊಳದಿಂದ ಬೊಂಬಾಯಿಗೆ ಮತ್ತು ಒಂದಕ್ಕೆ ಸಾರಿಗೆ ಸೌಲಭ್ಯವನ್ನು ಪ್ರಾರಂಭಿಸುವ ಪ್ರಸ್ತಾವನೆಯು ಪರಿಶೀಲನೆಯಲ್ಲಿದೆ.

ಆ) ಅಂತರ ರಾಜ್ಯದ ಒಪ್ಪಂದವು ಮುಗಿದ ನಂತರ ಸಾರಿಗೆ ಸೇವೆಯನ್ನು ಪ್ರಾರಂಭಿಸಲಾಗುವುದ.

ಮುಳಬಾಗಿಲು ತಾಲ್ಲೂಕಿಗೆ ವಿದ್ಯುತ್ ಲೈನುಗಳು.

3287 - ಶ್ರೀ ಎಂ.ಡಿ. ವೆಂಕಟಪ್ಪ (ಮುಳಬಾಗಿಲು) : ಮಾನ್ಯ ಇಂಧನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವುರೆ?

ಅ) ಮುಳಬಾಗಿಲು ತಾಲ್ಲೂಕಿಗೆ 66 ಕೆ.ವಿ. ವಿದ್ಯುಚ್ಛಕ್ತಿ ಲೈನನ್ನು 1991 ಮಾರ್ಚಿ 31 ರೊಳಗೆ ಪೂರ್ತಿಮಡಿ ವಿದ್ಯುಚ್ಛಕ್ತಿ ಒದಗಿಸುವುದಾಗಿ ವಿಧಾನಸಭೆಯಲ್ಲಿ ಆಶ್ವಾಸನೆ ಕೊಡಲಾಗಿದೆಯೆ?

ಆ) ಹಾಗಿದ್ದಲ್ಲಿ, ಇದುವರಿಗೂ 66ಕೆ.ವಿ.ವಿದ್ಯುಚ್ಛಕ್ತಿ ಒದಗಿಸದಿರುವುದಕ್ಕೆ ಕಾರಣಗಳೇನು?

ಇ) ಈ ರೀತಿಯ ವಿಳಂಭಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಕಾರಣರಾಗಿದ್ದಲ್ಲಿ ಅವರು ಮೇಲೆ ಕಾನೂನು ರೀತ್ಯ ಕ್ರಮ ಕೈಗೊಳ್ಳುವರೆ?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಸಚಿವರು):

ಅ) ಹೌದು.

ಆ) ಕೋಲಾರದಿಂದ ಮುಳಬಾಗಿಲಿಗೆ 66 ಕೆ.ವಿ. ವಿದ್ಯುತ್ ಲೈನಿಗೆ ನಿರ್ಮಾಣ ಕಾರ್ಯವನ್ನು ಮಾರ್ಚಿ 1991ರ ವೇಳೆಗೆ ಪೂರ್ಣಗೊಳಿಸಲು ಯೋಜಿಸಿತ್ತು. ಆದರೆ ಸಾಮಾಗ್ರಿಗಳ ಕೊರತೆಯಿಂದಾಗಿ ಈ ಕಾರ್ಯವನ್ನು ಪೂರ್ಣಗೊಳಿಸುವಲ್ಲಿ ಸ್ವಲ್ಪ ವಿಳಂಭ ಉಂಟಾಯಿತು.ಜೂನ್ 1991ರಲ್ಲಿ ಸದರಿ ವಿದ್ಯುತ್ ಲೈನಿನ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲಾಗಿದೆ.

ಇ) ವಿಳಂಬಕ್ಕೆ ಅಧಿಕಾರಿಗಳು ಕಾರಣರಲ್ಲ ಹೀಗಾಗಿ ಅವರ ಮೇಲೆ ಕಾನೂನು ರೀತ್ಯ ಕ್ರಮವನ್ನು ತೆಗೆದುಕೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಮೂಡಿಗೆರೆ ಕ್ಷೇತ್ರದಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ

3288 - ಶ್ರೀಮತಿ ಮೋಟಮ್ಮ (ಮೂಡುಗೆರೆ) : ಮಾನ್ಯ ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮೂಡಿಗೆರೆ ವಿಧಾನ ಸಭೆ ಕ್ಷೇತ್ರಕ್ಕೆ ಸೇರಿದ ಅಲ್ಲೂರು, ಬಣಕಲ್, ಕಳಸಾ, ಮೂಡಿಗೆರೆ ಜೂನಿಯರ್ ಕಾಲೇಜಿನಲ್ಲಿ ಪ್ರಾಂಶುಪಾಲರ ಹುದ್ದೆಗಳು ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಆ) ಹಾಗಿದ್ದಲ್ಲಿ ಸರ್ಕಾರ ಎಲ್ಲಿಯವರೆವಿಗೂ ಆ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ಕಾರಣವೇನು?

ಶ್ರೀ ಎಂ. ವೀರಪ್ಪ ಮೊಯಿಲಿ (ಶಿಕ್ಷಣ ಹಾಗೂ ಸಂಸದೀಯ ವ್ಯವಹಾರಗಳ ಸಚಿವರು)

ಅ) ಗಮನಕ್ಕೆ ಬಂದಿದೆ.

ಆ) ಭರ್ತಿ ಮಾಡಲು ಅಗತ್ಯ ಕ್ರಮ ತೆಗೆದುಕೊಳ್ಳಲಾಗಿದೆ.